# ಬುದ್ಧಿಜೀವಿಗಳಿಗೆ ಡಿಶ್ಯೂಂ ಡಿಶ್ಯೂಂ...



ಮಂಸೋರೆ

‘ಬುದ್ಧಿಜೀವಿಗಳನ್ನೆಲ್ಲ ದೇಶ ಬಿಟ್ಟು ಓಡಿಸಬೇಕು’ – ಯೋಧನ ಮನೆ ಭೇಟಿ ನೀಡಿ ಬಂದ ‘ಬೆಲ್‌ಬಾಟಂ’ ಹೀರೊ ರಿಷಬ್ ಶೆಟ್ಟಿ ಹೀಗೆ ಪತ್ತೆದಾರಿ ದಿವಾಕರನ ಶೈಲಿಯಲ್ಲಿ ಡಿಶ್ಯಾವ್ ಡಿಶ್ಯಾವ್ ಎಂದು ಪುಂಖಾನುಪುಂಖವಾಗಿ ಮಾತುಗಳನ್ನು ಹೊರಚೆಲ್ಲುತ್ತಿರುವಾಗ ಹಿಂದೆಲ್ಲೋ ನಿಂತಿದ್ದ ಸೂಕ್ಷ್ಮ ಸಂವೇದನೆಯ ನಿರ್ದೇಶಕ ಜಯತೀರ್ಥ ಮನಸ್ಸಿನಲ್ಲಿಯೇ ‘ಕಟ್ ಕಟ್..’ ಎಂದು ಹೇಳಿರಬೇಕು. ಪ್ರಗತಿಪರ ಆಲೋಚನೆಗಳ ಮೂಲಕವೇ ಗುರ್ತಿಸಿಕೊಂಡಿರುವ, ಈ ಚಿತ್ರಕ್ಕೆ ಕಥೆ ಬರೆದಿರುವ ಟಿ.ಕೆ. ದಯಾನಂದ, ತಮ್ಮ ಸಿನಿಮಾ ಹೀರೊ ‘ಸ್ವಂತಬುದ್ಧಿ’ಯಿಂದ ಡೈಲಾಗ್‌ಗಳನ್ನು ಕಟ್ಟಿ ಕುಟ್ಟಲು ಶುರುಮಾಡಿದ್ದಕ್ಕೆ ಅಚ್ಚರಿಪಡಬೇಕೋ ಅಥವಾ ಅವರ ಮಾತಿನ ದಾಳಿ ತನ್ನನ್ನೇ ಉದ್ದೇಶಿಸಿ ಇರುವಂತೆನಿಸಿ ಖೇದಪಡಬೇಕೋ ಗೊತ್ತಾಗದೆ ಕೈ ಕೈ ಹಿಸುಕಿಕೊಳ್ಳುತ್ತಿರಬೇಕು. ಬೆಲ್‌ಬಾಟಂ ಪ್ಯಾಂಟಿನ ಹೊಲಿಗೆ ನಿಧಾನಕ್ಕೆ ಬಿಚ್ಚಿಹೋಗುತ್ತಿರುವ ಹಾಗೆ ಅನಿಸಿರಲಿಕ್ಕೂ ಸಾಕು.

ಇತ್ತೀಚೆಗೆ ಹೀಗೆ ಸಾರ್ವಜನಿಕವಾಗಿ ‘ಬುದ್ಧಿಜೀವಿ’ಗಳ ಮೇಲೆ ಆಕ್ರೋಶ ವ್ಯಕ್ತಪಡಿಸಿ ತಾವು ಸುಭಗ ಎನಿಸಿಕೊಳ್ಳುವ ಸರ್ಕಸ್‌ಗಿಳಿದಿದ್ದು ರಿಷಬ್ ಒಬ್ಬರೇ ಅಲ್ಲ. ‘ನಾತಿಚರಾಮಿ’ ಸಿನಿಮಾ ನಿರ್ದೇಶಕ ಮಂಸೋರೆ ಕೂಡ ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ, ಪುಲ್ವಾಮಾದಲ್ಲಿ ಸೈನಿಕರ ಮೇಲೆ ನಡೆದ ಉಗ್ರಗಾಮಿ ದಾಳಿಗೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯುತ್ತಿರುವ ಚರ್ಚೆಗಳ ಕುರಿತು ತಮ್ಮ ಅಭಿಪ್ರಾಯ ದಾಖಲಿಸಿದ್ದರು. ಪರ–ವಿರೋಧ ಎರಡೂ ಗುಂಪುಗಳಿಗೆ ಅರ್ಧರ್ಧ ಕೆ.ಜಿ. (ತಕ್ಕಡಿಯಲ್ಲಿ ತೂಕ ಮಾಡಿ) ಬೈಯುವುದರ ಮೂಲಕ ತಮ್ಮ ‘ಕರೆಕ್ಟ್’ ನಿಲುವಿಗೆ ಪುರಾವೆಗಳನ್ನು ಕೊಟ್ಟುಕೊಂಡಿದ್ದರು. ‘ಬುದ್ಧಿಜೀವಿ ನೂರಾರು ಜನರ ಮೆದುಳಿಗೆ ಕೈ ಹಾಕಿ ಅವರ ಮನಸ್ಥಿತಿಯನ್ನು ಕರಪ್ಟ್ ಮಾಡಿ ಸೈನಿಕರ ಬಗ್ಗೆ ದ್ವೇಷ ಹುಟ್ಟಿಸುತ್ತಾನೆ’ ಎಂಬುದು ಅವರ ಆಕ್ರೋಶಕ್ಕೆ ಕಾರಣ.

ಈ ಇಬ್ಬರೂ ಅಥವಾ ಇಂಥ ಹಲವರು, ಫೇಸ್‌ಬುಕ್‌ನಲ್ಲಿ ನಿಯಮಿತವಾಗಿ ಸ್ಟೇಟಸ್ ಹಾಕುವವರಷ್ಟೇ ಬುದ್ಧಿಜೀವಿಗಳು, ಅವರು ಹಾಕುವ ಮೂರು ಸಾಲುಗಳ ಸ್ಟೇಟಸ್ ಮಹಾ ವಿಶ್ಲೇಷಣೆ ಎಂದು ನಂಬಿದಂತಿದೆ. ಇಬ್ಬರ ‘ಬುದ್ಧಿದ್ವೇಷ’ಕ್ಕೂ ಕಾರಣ ಅವರು ಮಾಡಿದ ಸಿನಿಮಾಗಳಲ್ಲಿಯೇ ಸಿಗುತ್ತದೆ ಬಿಡಿ. ಆದರೆ ‘ತಮ್ಮ ಬಂಡವಾಳ ಜನರಿಗೆ ಇನ್ನೂ ಅರ್ಥವಾಗಿಲ್ಲ. ಅವರು ತಮ್ಮಷ್ಟೇ ಬುದ್ಧಿಕೃಶರು’ ಎಂದು ಬಲವಾಗಿ ನಂಬಿದಂತಿರುವ ಇವರು ಮತ್ತೆ ಮತ್ತೆ ಸಾರ್ವಜನಿಕ ವೇದಿಕೆಗಳಲ್ಲಿ ಪ್ರದರ್ಶಿಸುತ್ತಿರುವುದು ಮಾತ್ರ ಇನ್ನೊಂದು ಕಾಮಿಡಿ ಸಿನಿಮಾಗೆ ವಸ್ತುವಾಗಬಲ್ಲದು. ■



ರಿಷಬ್ ಶೆಟ್ಟಿ



# ರಾಘಣ್ಣನ ಮಗಳು!

ನಿಖಿಲ್ ಮಂಜೂ ನಿರ್ದೇಶನದ, ರಾಘವೇಂದ್ರ ರಾಜ್‌ಕುಮಾರ್ ನಟನೆಯ ‘ಅಮ್ಮನ ಮನೆ’ ಬಿಡುಗಡೆಗೆ ಸಜ್ಜಾಗಿದೆ. ಸುದೀರ್ಘ ವಿರಾಮದ ನಂತರ ರಾಘಣ್ಣ ಮತ್ತೆ ನಾಯಕನಾಗಿ ನಟಿಸಿರುವುದು ಈ ಚಿತ್ರದ ವಿಶೇಷ. ಹೆಸರೇ ಹೇಳುವ ಹಾಗೆಯೇ ಒಬ್ಬ ಗಂಡಿನ ಬದುಕಿನಲ್ಲಿ ಬರುವ ಮೂರು ಹೆಣ್ಣುಮಕ್ಕಳನ್ನು ಇಟ್ಟುಕೊಂಡು ನಿರ್ದೇಶಕರು ಕತೆಯನ್ನು ಕಟ್ಟಿದ್ದಾರೆ. ತಾಯಿ, ಹೆಂಡತಿ ಮತ್ತು ಮಗಳು ಈ ಮೂವರ ಸಂಬಂಧ ಹೆಣಿಗೆಯಲ್ಲಿ ಈ ಸಿನಿಮಾದ ಆತ್ಮವಿದೆ ಎನ್ನುವುದು ನಿರ್ದೇಶಕರ ಅಂಬೋಣ.

‘ಅಮ್ಮನ ಮನೆ’ಯಲ್ಲಿ ರಾಘಣ್ಣನ ಮಗಳಾಗಿ ನಟಿಸಿರುವ ಹುಡುಗಿ ಶೀತಲ್. ಬಿ.ಕಾಂ ಅಂತಿಮ ವರ್ಷದಲ್ಲಿ ಓದುತ್ತಿರುವ ಇವರು ಭರತನಾಟ್ಯ ಕಲಾವಿದೆ. ಕರ್ನಾಟಕ ಸಂಗೀತದ ವಿದ್ಯಾರ್ಥಿಯೂ ಹೌದು. ನಾಟ್ಯ ಮತ್ತು ಸಂಗೀತದ ಧ್ಯಾನದಲ್ಲಿ ಮುಳುಗಿದ್ದ ಹುಡುಗಿಯನ್ನು ಸಿನಿಮಾರಂಗಕ್ಕೆ ಕರೆತಂದು ಹೊಸ ಪೀಳಿಗೆಯ ಹುಡುಗಿಯ ವೇಷ ತೊಡಿಸಿದ್ದಾರೆ ನಿಖಿಲ್.

‘ನನಗೆ ನಟಿಸಬೇಕು ಎಂಬ ಆಸೆ ಇತ್ತು. ಆದರೆ ಅವಕಾಶ ಸಿಗುತ್ತದೆ ಎಂದು ಅಂದುಕೊಂಡಿರಲಿಲ್ಲ. ನನ್ನ ನಿರೀಕ್ಷೆಯೂ ಮೀರಿ, ಮೊದಲ ಸಿನಿಮಾದಲ್ಲಿಯೇ ರಾಘವೇಂದ್ರ ರಾಜ್‌ಕುಮಾರ್ ಅವರಂಥ ಹಿರಿಯ ನಟನ ಜತೆ ತೆರೆಯನ್ನು ಹಂಚಿಕೊಳ್ಳುತ್ತಿರುವುದು ಬಯಸದೇ ಬಂದ ಭಾಗ್ಯ. ಈ ಅವಕಾಶದಿಂದ ಅಚ್ಚರಿ ಮತ್ತು ಖುಷಿ ಎರಡೂ ಆಗಿದೆ’ ಎನ್ನುತ್ತಾರೆ ಶೀತಲ್.

ಮೊದಲ ದಿನ ಶೂಟಿಂಗ್ ಹೋಗುವಾಗಲೇ ಅಪ್ಪ, ಅಮ್ಮ ‘ಯಾವಾಗ ಬೇಕಾದರೂ ಚಿತ್ರದಿಂದ ನಿನ್ನನ್ನು ಕೈಬಿಡಬಹುದು. ಅದಕ್ಕೆ ಅವಕಾಶ ಮಾಡಿಕೊಡಬೇಡ. ಎಷ್ಟು ಸಾಧ್ಯವೋ ಅಷ್ಟು ಚೆನ್ನಾಗಿ ನಟಿಸು’ ಎಂದೇ ಹೇಳಿಕಳಿಸಿದ್ದರಂತೆ. ಮೂರು ನಾಲ್ಕು ದಿನ ಶೂಟಿಂಗ್‌ನಲ್ಲಿ ಭಾಗವಹಿಸಿದ ಮೇಲೆಯೇ ಅವರಿಗೆ ನಂಬಿಕೆ ಬಂದಿದ್ದು.

‘ಸಂಬಂಧಗಳ ಮಹತ್ವ ಹೇಳುವ ಸಿನಿಮಾ ಇದು. ಈ ಸಿನಿಮಾದ ಮೂಲಕ ನನ್ನ ನಟನಾಜೀವನ ಆರಂಭವಾಗುತ್ತಿರುವುದಕ್ಕೆ ಹೆಮ್ಮೆಯಿದೆ’ ಎಂದು ಹೇಳಿಕೊಳ್ಳುವ ಶೀತಲ್‌ಗೆ ಒಳ್ಳೆಯ ಕಥೆ, ಪಾತ್ರ ಸಿಕ್ಕರೆ ಮುಂದೆಯೂ ಚಿತ್ರರಂಗದಲ್ಲಿ ಮುಂದುವರಿಯುವ ಇರಾದೆ ಇದೆ. ■